

# ಡ್ಯಾಶಿಂಗ್ ಕಂಗನಾ

ಬಿ- ಟೌನಿನ ಗಲ್ಲಿಗಳಲ್ಲಿ ಗುಟ್ಟು ಗುಟ್ಟಾಗಿ ತೆಕ್ಕೆ ಹಾಕಿಕೊಂಡು ಓಡಾಡಿ ಕೊನೆಗೆ ಗಾಸಿಪ್‌ಗಳಿಗೆ ಆಹಾರವಾಗುವ ಜೋಡಿಗಳಿಗೇನೂ ಕಡಿಮೆಯಿಲ್ಲ. ಹಳೆ ಜೋಡಿಗಳ ಬ್ರೇಕ್‌ಅಪ್, ಹೊಸ ಜೋಡಿಗಳ ಹುಟ್ಟು ಇಲ್ಲಿ ನಿರಂತರ ಪ್ರಕ್ರಿಯೆ. ಇಬ್ಬರು ಮೂವರು ಗೆಳೆಯ/ಗೆಳತಿಯರನ್ನು ಒಂದೇ ಬಾರಿಗೆ ನಿಭಾಯಿಸಬಲ್ಲ ಚಾಣಾಕ್ಷರೂ ಇಲ್ಲಿದ್ದಾರೆ. ಇವರ ನಡುವೆ ಭಾವನಾತ್ಮಕವಾಗಿ ನಂಟು ಬೆಸೆದುಕೊಳ್ಳುವ ಮಂದಿ ಬೆರಳಣಿಕೆಯಷ್ಟು ಮಾತ್ರ. ಈ ಬಾಂಧವ್ಯಗಳು ಮುರಿದು ಬಿದ್ದ ನಂತರ ಅವರೇನೂ ಒಂಟಿಯಾಗಿ ಉಳಿಯುವುದಿಲ್ಲ. ಕೆಲ ದಿನಗಳಲ್ಲಿಯೇ ಹಳೆ ಪ್ರೇಮಿಯ ಜಾಗದಲ್ಲಿ ಹೊಸ ಪ್ರೇಮಿ ಹೆಜ್ಜೆ ಹಾಕುತ್ತಿರುತ್ತಾನೆ. ಆದರೂ ಈ ಬ್ರೇಕ್‌ಅಪ್‌ಗಳು ಕೆಲವರನ್ನು ಮಾನಸಿಕವಾಗಿ ಕುಗ್ಗಿಸುವುದು ನಿಜ.

ಆದರೆ ಬ್ರೇಕ್‌ಅಪ್ ಆದ ಮೂರೇ ದಿನಗಳಲ್ಲಿ ಆ ದುಃಖದಿಂದ ಹೊರಬರುವ ಛಾತಿ ಎನಗಿದೆ ಎನ್ನುತ್ತಾರೆ ಕಂಗನಾ ರನೌತ್. ಎಂಥಾ ಕಠಿಣ ಪರಿಸ್ಥಿತಿಯನ್ನಾದರೂ ಕುಗ್ಗದೆ ಎದುರಿಸಬಲ್ಲೆ ಎನ್ನುವುದನ್ನು ಕಂಗನಾ ಹಲವು ಬಾರಿ ಸಾಬೀತು ಪಡಿಸಿದ್ದಾರೆ. ಪ್ರೇಮ ವೈಫಲ್ಯಗಳಾದಾಗಲೂ ಕಂಗನಾ ಹೊರಜಗತ್ತಿಗೆ ಏನೂ ನಡೆದೇ ಇಲ್ಲ ಎಂಬಂತೆ ಕಾಣಿಸಿಕೊಂಡಿದ್ದರು. 'ನಾನು ಅತ್ಯಂತ ಗಟ್ಟಿಮನಸ್ಸಿನವಳು ಮತ್ತು ಅತಿ ಸ್ವಾಭಿಮಾನಿ. ಹೀಗಾಗಿಯೇ ಬ್ರೇಕ್‌ಅಪ್ ಆದರೆ ಮೂರೇ ದಿನಗಳಲ್ಲಿ ಆ ನೋವಿನಿಂದ ಹೊರಬರುವ ಸಾಮರ್ಥ್ಯ ನನಗಿದೆ' ಎಂದವರು ಹೇಳಿಕೊಂಡಿದ್ದಾರೆ.

ಅಂದ ಹಾಗೆ, 'ಕ್ವೀನ್' ಚಿತ್ರದಲ್ಲಿ ತಮ್ಮ ಈ ಡ್ಯಾಶಿಂಗ್ ವ್ಯಕ್ತಿತ್ವಕ್ಕೆ ವಿರುದ್ಧವಾದ ಪಾತ್ರಕ್ಕೆ ಕಂಗನಾ ಬಣ್ಣಹಚ್ಚಿದ್ದಾರೆ. ಈ ಪಾತ್ರದೊಳಗೆ ಪ್ರವೇಶಿಸುವುದು ಎಷ್ಟು ಕಷ್ಟ ಎನ್ನುವುದನ್ನು ವಿವರಿಸುವಾಗ ಕಂಗನಾ ತಮ್ಮ ಶಕ್ತಿಯ ಕುರಿತು ಪ್ರಸ್ತಾಪಿಸಿದ್ದಾರೆ. ಏಕೆಂದರೆ ಈ ಚಿತ್ರದಲ್ಲಿ ಕಂಗನಾ ದುರ್ಬಲ ಮನಸ್ಸಿನ, ಕೀಳರಿಮೆ ಹೊಂದಿರುವ ಯುವತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. '15ನೇ ವಯಸ್ಸಿನಿಂದಲೇ ಅಪ್ಪ ಅಮ್ಮನ ಜೊತೆಯಲ್ಲಿಲ್ಲದೆ ಬೆಳೆದಿದ್ದೇನೆ. ಯಾರ ನೆರವೂ ಇಲ್ಲದೆಯೇ ಏಕಾಂಗಿಯಾಗಿ ಬೆಳೆಯುವ ಸ್ಥೈರ್ಯ ಬಾಲ್ಯದಿಂದಲೇ ಮೈಗೂಡಿದೆ' ಎನ್ನುತ್ತಾರೆ ಕಂಗನಾ. ಸೋತಾಗ ಬದುಕನ್ನೇ ಕಳೆದುಕೊಳ್ಳುವ ದುರ್ಬಲ ಮನಸ್ಸಿನ ನಟಿಯರ ನಡುವೆ ಗಟ್ಟಿಗಿತ್ತಿ ಕಂಗನಾಗೊಂದು ಹ್ಯಾಟ್ಸಾಫ್ ಹೇಳಲೇಬೇಕಲ್ಲವೇ?

# ವಿದ್ಯಾಗೆ ಕೈಯಳತೆಯಲ್ಲೇ ಆಸ್ಕರ್!



ಭಾರತೀಯರಿಗೆ ಮರೀಚಿಕೆ ಎನಿಸಿರುವ ನಟನಾ ವಿಭಾಗದ ಆಸ್ಕರ್ ಪ್ರಶಸ್ತಿಯನ್ನು ಪಡೆದುಕೊಳ್ಳುವುದು ಕಷ್ಟವೇನಲ್ಲ ಎಂದು 'ಪರಿಣೀತಾ'ದ ಬೆಡಗಿ ವಿದ್ಯಾ ಬಾಲನ್ ಅವರಿಗೆ ಅನಿಸಿದೆ. 'ಪದ್ಮಶ್ರೀ ಪಡೆದುಕೊಳ್ಳುತ್ತೇನೆ ಎಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಈಗ ಆಸ್ಕರ್ ಕೈಗೆಟಕುವುದು ಹೆಚ್ಚು ದೂರವಿಲ್ಲ ಎನಿಸುತ್ತಿದೆ' ಎನ್ನುತ್ತಿದ್ದಾರೆ ವಿದ್ಯಾ.

ಸದ್ಯ 'ಶಾದಿ ಕಿ ಸೈಡ್ ಎಫೆಕ್ಟ್ಸ್'ಗೆ ದೊರಕುತ್ತಿರುವ ಪ್ರತಿಕ್ರಿಯೆಯಿಂದ ಪುಳಕಿತಗೊಂಡಿರುವ ವಿದ್ಯಾ ಅದು ದೊಡ್ಡ ಗೆಲುವಾಗಿ ಪರಿವರ್ತನೆಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ. 'ನನ್ನ ವೃತ್ತಿಬದುಕಿನ ಉದ್ದಕ್ಕೂ ದೊರೆತಿರುವ ಪ್ರೀತಿ ಮತ್ತು ಮೆಚ್ಚುಗೆಗಳಿಂದ ಸಂತುಷ್ಟಳಾಗಿದ್ದೇನೆ. ಹೊಸಬಗೆಯ ಮತ್ತು ವೈವಿಧ್ಯಮಯ ಪಾತ್ರಗಳನ್ನು ಮಾಡಲು ಪ್ರಯತ್ನಿಸುತ್ತಿದ್ದೇನೆ' ಎನ್ನುತ್ತಾರೆ.

ಸದ್ಯಕ್ಕೆ ವಿದ್ಯಾಗೆ ರಾಜಕೀಯಕ್ಕೆ ಬರಲು ಆಸಕ್ತಿ ಇಲ್ಲವಂತೆ. ಆಸೆ ಮತ್ತು ನಿರೀಕ್ಷೆಗಳಿಗೆ ಹಂಗು ಯಾಕೆ? ಎಂತಹ ಪಾತ್ರಕ್ಕೂ ಸೈ ಎನ್ನುವ ವಿದ್ಯಾ ಪ್ರತಿಭೆಗೆ ಆಸ್ಕರ್‌ಗಿಂತಲೂ ದೊಡ್ಡ ಪ್ರಶಸ್ತಿ ಸಿನಿ ಪ್ರಿಯರಿಂದ ಈಗಾಗಲೇ ಸಿಕ್ಕಿದೆಯಲ್ಲವೇ? ಆದರೂ ಅವರ ಆಸೆ ಈಡೇರಲಿ ಎನ್ನೋಣ.

■ ಅಮಿ